**ಓ ಎಸ್ 145/2023 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ**

ನಮ್ಮ ತಂದೆ ತಿರುಮಲೇಗೌಡರಿಗೆ ನಾವು 5 ಜನ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ. ವಾದಿ ತಿಮ್ಮೇಗೌಡ ನನ್ನ ಅಣ್ಣ. ಪುಟ್ಟಮ್ಮ ನನ್ನ ಅಕ್ಕ ಆಗಿದ್ದು ಗೋವಿಂದೇಗೌಡ ಮತ್ತು ವೆಂಕಟೇಶ ನನ್ನ ತಮ್ಮಂದಿರು. ವೆಂಕಟೇಶ ಈಗ ಮರಣ ಹೊಂದಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿಯು ವೆಂಕಟೇಶ್ ರವರ ಹೆಂಡತಿಯಾಗಿದ್ದು 6 ಮತ್ತು 7 ನೇ ಪ್ರತಿವಾದಿಗಳು ಅವರ ಮಕ್ಕಳಾಗಿದ್ದಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಗಳು ನಮ್ಮ ಹೆಸರಿಗೆ ಜಂಟಿಯಾಗಿ ಪೌತಿ ಖಾತೆ ಮೂಲಕ ದಾಖಲಾಗಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತುಗಳು ಪೋಡಿ ಆಗಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಹೆಸರಿಗೆ ಪ್ರತ್ಯೇಕವಾಗಿ ಖಾತಾ ದಾಖಲು ಆಗಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಅವರವರಿಗೆ ಸೇರಬೇಕಾದ ಭಾಗಾಂಶವನ್ನು ಪಡೆದುಕೊಳ್ಳಲು ನನ್ನ ತಕರಾರು ಇದೆ, ಏಕೆಂದರೆ ನನ್ನ ತಂದೆ ಮೊದಲೇ ಭಾಗ ಮಾಡಿದ್ದಾರೆ. ನಮ್ಮ ತಂದೆಯು ವಿಭಾಗ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೇವೆ. ವಿಭಾಗ ಪಟ್ಟಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ನಮ್ಮ ತಂದೆಯು ವಿಭಾಗ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ವಿಭಾಗ ಪಟ್ಟಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಮ್ಮ ತಂದೆಯು ವಿಭಾಗ ಮಾಡಿದಿದ್ದರೆ ಕಂದಾಯ ದಾಖಲೆಗಳು ವಿಭಾಗದ ಆಧಾರದ ಮೇಲೆ ನಮೂದು ಆಗುತ್ತಿದ್ದವೆಯೇ ಹೊರತು ಪೌತಿ ಖಾತೆ ಆಧಾರದ ಮೇಲೆ ನಮೂದು ಆಗುತ್ತಿರಲಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯ ಸಂಗತಿಗಳು ನನಗೆ ಗೊತ್ತಿವೆ. ದಾವಾ ಷೆಡ್ಯೂಲ್ ಐಟಂ ನಂ. 1 ಮತ್ತು 8 ನ್ನು ವಾದಿಯು ನನಗೆ ಮಾರಾಟ ಮಾಡಿರುವ ಸಂಬಂಧ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1, 8 ಹಾಗೂ 10 ರಲ್ಲಿರುವ ಸ್ವತ್ತುಗಳನ್ನು ನನಗೆ, ಗೋವಿಂದೇಗೌಡರಿಗೆ ಮತ್ತು ವೆಂಕಟೇಶ್ ರವರಿಗೆ ಮಾರಾಟ ಮಾಡಿದ್ದಿದ್ದರೆ ನಾವು ಅದಕ್ಕೆ ಸಂಬಂಧಪಟ್ಟಂತೆ ಕ್ರಯಪತ್ರಗಳನ್ನು ಬರೆಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಹಾಗೆ ಮಾರಾಟ ಆಗದೆ ಇರುವ ಕಾರಣ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತನ್ನ ಮಗಳಾದ ಶಾರದಾರವರ ಹೆಸರಿಗೆ ಬೆಳವಾಡಿ ಗ್ರಾಮದ ಸರ್ವೆ ನಂ. 148/2 ರಲ್ಲಿ 0.03 ಗುಂಟೆ ಜಮೀನನ್ನು ಖರೀದಿಸಿರುವ ಬಗ್ಗೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಶಾರಾದರವರಿಗೆ ಮದುವೆಯಾಗಿದೆ ಎಂದರೆ ಸರಿ. ಅವರು ತನ್ನ ಗಂಡನ ಜೊತೆಯಲ್ಲಿ ಇದ್ದಾರೆ ಎಂದರೆ ಸರಿ. ವಾದಿಯು ತನ್ನ ಮಗಳಾದ ಶಾರದಾರವರ ಹೆಸರಿನಲ್ಲಿ ಯಾವುದೇ ಆಸ್ತಿಯನ್ನು ಖರೀದಿಸದೆ ಇದ್ದರೂ ಸಹ ದಾವೆಯಲ್ಲಿ ನನ್ನ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**